★★★

ರಾಮಕೃಷ್ಣ ಸಣ್ಣವನಾದರೂ ವಿವೇಕಿ. ಅಕ್ಕನ ಬದುಕಿನ ದುರಂತ ಅವನನ್ನು ವಯಸ್ಸಿಗೆ ಮೀರಿ ದೊಡ್ಡವನನ್ನಾಗಿಸಿತ್ತು ಎನ್ನುವಂತೆ ಅಕ್ಕನ ಭವಿಷ್ಯದ ಬಗ್ಗೆ ಅಪ್ಪನಿಗಿಂತಾ ಹೆಚ್ಚು ಯೋಚಿಸಿ ನಿರ್ಧಾರ ಪ್ರಕಟಿಸಿದ ಹುಡುಗ, 'ಅಕ್ಕ ನನ್ನ ಜೊತೆ ಕಾಲೇಜಿಗೆ ಬರಲಿ. ಮುಂದೆ ಓದಲಿ...'

ಹೆತ್ತವರಿಗೆ ಭಯ. ಕಾಲೇಜು ಅಂದರೆ ಬಸ್ಸು ಹಿಡಿದು ಬೇರೆ ಊರಿಗೆ ಹೋಗಬೇಕು. ವಾಪಸು ಬರುವಾಗ ಕತ್ತಲಾದರೂ ಆದೀತು. ಹಟಕ್ಕೆ ಆ ಪೈಕಿಯವರೇನಾದರೂ ದಾರಿಯಲ್ಲಿ ಅಡ್ಡ ಹಾಕಿ ಕೈಕಾಲು ಮುರಿದರೆ? ತಲೆ ಒಡೆದರೆ? 'ಹೆದರಿಹೆದರಿ ಸಾಯೋದಕ್ಕಿಂತಾ ನಿಜವಾಗಿ ಸಾಯೋದು ಒಳ್ಳೇದು...' ಅಂದಿದ್ದು ಇವನೇನಾ? ರಾಮಕೃಷ್ಣ ಎನ್ನುವ ಅಬೋಧ ಹುಡುಗ? ಪರಿಸ್ಥಿತಿ ಎಂತವರನ್ನೂ ಮಾಗಿಸಿಬಿಡುತ್ತದೆಯಾ? ಅವಧಿಗೆ ಮುನ್ನ ಹಣ್ಣಾಗಿಸುತ್ತದೆಯಾ?

ಮನೆಯವರು ಹೆದರಿದಂತೆ ಏನೂ ಆಗಲಿಲ್ಲ. ಯಾರೂ ದಾರಿಯಲ್ಲಿ ಅಡ್ಡ ಹಾಕಲಿಲ್ಲ. ತಪ್ಪು ಮಾಡಿದವರ ಪಾಪಪ್ರಜ್ಞೆ ಇದರ ಹಿಂದೆ ಕೆಲಸ ಮಾಡಿರಬಹುದು ಅಥವಾ ಮನೆಯ ಮರ್ಯಾದೆ ಬೀದಿರಂಪವಾಗಬಾರದೆಂಬ ಹಿಂಜರಿಕೆಯೂ. ಸುಸೂತ್ರವಾಗಿ ಡಿಗ್ರಿ ಮುಗಿಸಿಕೊಂಡಳು ರಾಧ. ತನ್ನ ಭವಿಷ್ಯ ಎನ್ನುವುದು ಮುಂದಿನ ಓದಿನಲ್ಲಷ್ಟೇ ಅರಳಿಕೊಳ್ಳಲು ಸಾಧ್ಯ ಎಂಬುದು ಅವಳ ಅಂತರಂಗದಲ್ಲಿ ಸುಸ್ಪಷ್ಟವಾಗಿತ್ತು. ನಾಳೆ ತಮ್ಮನಿಗೆ ಮದುವೆಯಾಗುತ್ತದೆ. ಈ ಮನೆಗೆ ಬರುತ್ತಾಳೆ ಹೊಸ ಸದಸ್ಯೆ. ಎಲ್ಲೋ ಬೆಳೆದವಳು ಈ ಮನೆಯ ಯಜಮಾಂತಿಯಾಗುತ್ತಾಳೆ. ಇಲ್ಲಿ ಹುಟ್ಟಿ ಬೆಳೆದವಳು ಪರಕೀಯಳು. ಏನಿದ್ದರೂ ಎಲ್ಲಾ ತಮ್ಮನ ಹಕ್ಕು. ಇದೆಂತಾ ನ್ಯಾಯ? ಏನೇನೆಲ್ಲಾ ಅನಿಸುತ್ತಿತ್ತು ಒಂದು ಕಾಲದಲ್ಲಿ. ತನ್ನ ಕಾಲ ಮೇಲೆ ತಾನು ನಿಲ್ಲಲೇಬೇಕಾದ ಅನಿವಾರ್ಯತೆಗೆ ಪ್ರಚೋದಿಸುತ್ತಿತ್ತು. ಬಿಟ್ಟು ಬಂದವನ ಕುರಿತು ಯಾವ ಪಶ್ಚಾತ್ತಾಪವೂ ಇಲ್ಲದೆ ಓದಿದಳು ರಾಧ. ವಿಚ್ಛೇದನ ಅನ್ನುವುದು ಸಮಾಜದಲ್ಲಿ ವ್ಯಾಪಕವಾಗಿ ಪ್ರಚಾರದಲ್ಲಿಲ್ಲದ ಕಾಲ. ಅವನಿಗೆ ಅದರ ಆವಶ್ಯಕತೆ ಬೀಳಲಿಲ್ಲ. ಇವರಿಗೆ ಕೇಳಬೇಕೆಂದೆನಿಸಲಿಲ್ಲ. ಬಿಟ್ಟು ಹೊಡೆಯುವುದು ಅಂದರೆ ಬಿಟ್ಟು ಬಿಡುವುದು, ಅಷ್ಟೇ.

> **'ಎಂಜಲು ತಿನ್ನುವ ದುರ್ಗತಿ ತನಗೆ ಬಂದಿಲ್ಲ' ಎಂದು ಗಟ್ಟಿ ನಿರ್ಧಾರ ಮಾಡಿದಳು ರಾಧ. ಗೌರಿಹಬ್ಬದ ನೆಪದಲ್ಲಿ ತೌರೂರಿಗೆ ಹೊರಟವಳು ಆ ಮನೆಯವರು ಕೊಟ್ಟಿದ್ದನ್ನೆಲ್ಲಾ ಅಲ್ಲಿಯೇ ಕಳಚಿಟ್ಟು ಕೈ ಬೀಸಿಕೊಂಡು ಬಂದಳು. ಅಲ್ಲಿಗೆ ಮುಗಿಯಿತು ಋಣ.**

ರಾಮಕೃಷ್ಣ ಡಿಗ್ರಿ ಮುಗಿಸಿ ಓದಿಗೆ ವಿರಾಮ ಹಾಕಿ ಜಮೀನು, ಮನೆಯ ನಿಗಾ ವಹಿಸಲು ಪ್ರಾರಂಭಿಸುವ ಹೊತ್ತಿಗೆ ಇವಳು ಮಾಸ್ಟರ್ಸ್ ಡಿಗ್ರಿ ಪೂರೈಸಿಕೊಂಡಿದ್ದಳು. ದೂರದ ಬೆಂಗಳೂರಿನಲ್ಲಿ ಮುಂದುವರಿದ ವಿದ್ಯಾಭ್ಯಾಸ. ಹಾಸ್ಟೆಲ್ ವಾಸ. ಅಪ್ಪ ಪ್ರತಿರೋಧ ತೋರಿಸಿದರೂ ಅದರಲ್ಲಿ ಇರಬೇಕಾದ ಕಾವು ಇರದೆ ಒಂಥರಾ ಹತಾಶೆ. ಹೇಳಕೇಳುವವರಿಲ್ಲದ ಕಡೆ ಮಗಳು ಏನಾದರೂ ಅಚಾತುರ್ಯ ಮಾಡಿಕೊಂಡರೆ ಎನ್ನುವ ಭಯ. ಎಷ್ಟಾದರೂ ಪ್ರಾಯ.

ಪ್ರಾಯ ರಾಧೆಯನ್ನು ಕಾಡಿದ್ದು ಸುಳ್ಳೇನಲ್ಲ. ಆದರೆ ಜಾರುವ ನೆಲದ ಮೇಲೆ ನಿಂತಿದ್ದ ರಾಧ ಕಾಲಿನ ಮೇಲೆ ಉಡದ ಹಿಡಿತ ಸಾಧಿಸಿಕೊಂಡಿದ್ದಳು. ಅದೊಂದು ಅಧ್ಯಾಯ ತನ್ನ ಬಾಳಿನ